ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಲೈಸೆನ್ಸ್ ತೆಗೆದು ಕೊಂಡಿದ್ದರೂ ಕಂಟ್ರಾಕ್ಟ್‌ದಾರರು ಆ ರೀತಿ ಮುಂದುವರಿಸುವುದಾದರೆ ಅವರಿಗೆ ಫೈನ್ ಹಾಕಿ ಬೇರೆಯವರಿಗೆ ಕೊಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ತಪ್ಪು ಆದರೆ ಅವರಿಗೆ ನೋಟೀಸ್ ಕೊಟ್ಟು ಕೆಲಸ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ನೋಟೀಸ್ ಕೊಟ್ಟು ಕೆಲಸ ಮಾಡದೇ ಇದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ ಅವರು ಕೆಲಸ ಮುಂಗಿಸುತ್ತಿದ್ದಾರೆ.

Shortage of Iron in the State.

*Q.—583. **Smt. NAGARATHNAMMA HIREMATH** (Gandhinagar).—

Will the Government be pleased to state :—

(*a*) whether it is not a fact that there is acute shortage of iron in Mysore State ;

(*b*) whether they are aware of the hardships caused to the poor persons because of their inability to secure iron for constructing houses due to the shortage ;

(*c*) whether they are aware of the fact that iron distributors and dealers are selling it mostly in the black market ;

(*d*) whether they will make necessary arrangements to make available iron easily to all the people in general and the poor in particular ?

A.—**Sri K. MALLAPPA** (Minister for Industries and Cemmerce).—

(*a*) No.

(*b*) No hardships have been caused.

(*c*) No.

(*d*) Does not arise.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ನಾನು ಪ್ರಶ್ನೆ ಹಾಕಿದಾಗ್ಗೆ ಸೀಮೆಂಟ್ ಮತ್ತು ಕಬ್ಬಿಣದ ತೀವ್ರ ಕೊರತೆ ವಿಚಾರ ಕೇಳಿದ್ದೆ. ಸೀಮೆಂಟು ಬಿಟ್ಟು ಬಿಟ್ಟಿದ್ದೀರಿ. ಸೀಮೆಂಟು ಸಿಕ್ಕುತ್ತಾ ಇದೆಯೇ ? ಏತಕ್ಕೆ ಸೀಮೆಂಟ್ ಬಿಟ್ಟು ಬಿಟ್ಟಿದ್ದೀರಿ ?

Mr. SPEAKER.—The Hon'ble Lady Member must know that she cannot include more than one subject in the interpellations and therefore of the two questions, cement has been disallowed. If she wants, she can give seperate notice regarding cement for oral answer.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಈ ಕೊರತೆಯನ್ನು ಗಮನಕ್ಕೆ ತಂದಮೇಲೆಯಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

†ಶ್ರೀ ಕೆ. ಮಲ್ಲಪ್ಪ.—ಯಾರಿಗೆ ಬೇಕಾದರೂ ಕಬ್ಬಿಣ ಕೊಡಿಸಬಹುದು.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಯಾರಿಗೆ ಬೇಕಾದವರಿಗೆ ಕಬ್ಬಿಣ ಕೊಡಿಸುವುದು ಯಾವಾಗ ಜಾರಿಗೆ ಬಂದಿದೆ ?

ಶ್ರೀ ಕೆ. ಮಲ್ಲಪ್ಪ.—ಯಾರಿಗೆ ಸಿಕ್ಕುವುದಿಲ್ಲ ಎಂದು ತಿಳಿಸಿದರೆ ಅವರಿಗೆ ಕಂಟ್ರೋಲ್ ರೇಟಿನಿಂದ ಎಷ್ಟು ಬೇಕೋ ಅಷ್ಟನ್ನು ಕೊಡಿಸಬಹುದು.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಹಾಗೆ ಮನವಿಗಳು ಬಂದಿಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಯಾವುದೂ ಬಂದಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಪ್ರಾಜೆಕ್ಟುಗಳಿಗಾಗಲಿ ಸರಕಾರದ ಉಪಕರಣಗಳಿಗಾಗಲಿ ಹೊರಗಡೆಯಿಂದ ಎಷ್ಟು ಟನ್ ಕಬ್ಬಿಣವನ್ನು ವರ್ಷಂಪ್ರತಿ ತರಿಸಿಕೊಳ್ಳುತ್ತಿದ್ದೀರಿ ?

Mr. SPEAKER.—It is entirely outside the scope of the question. I do not know if the Minister has got information. He will give it if he has got it.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕೊರತೆ ಇಲ್ಲ ಎಂದು ಉತ್ತರ ಹೇಳುತ್ತಾರೆ. ಕೊರತೆ ಇರುವ ಬಗ್ಗೆ ಪ್ರಶ್ನೆ ಕೇಳುತ್ತಾ ಇದ್ದೇನೆ. ಹೊರಗಡೆಯಿಂದ ಬೇಕಾದಷ್ಟು ಕಬ್ಬಿಣವನ್ನು ತರಿಸಿಕೊಳ್ಳುತ್ತಿದ್ದಾರೆ. ಒಂದು ಟನ್‌ಗೆ ನೂರು ರೂಪಾಯಿ ಟ್ರಾನ್ಸ್‌ಪೋರ್ಟ್ ಕೂಡ ಕೊಡುತ್ತಿದ್ದಾರೆ. ಆದ್ದರಿಂದ ನಾನು ಕೇಳುತ್ತಿರುವುದು ಹೊರಗಡೆಯಿಂದ ಎಷ್ಟು ಟನ್ ಕಬ್ಬಿಣ ತರಿಸಿಕೊಳ್ಳಲಾಗುತ್ತಿದೆ ?

Mr. SPEAKER —What I mentioned to Sri Muckannappa equally applies to Sri Devendrappa. '*Korathe*' need not necessarily arise on acconnt of non-production in the State. If the needs of the State are met, do you call it '*Korathe*'?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಏನು ಕೇಳಿದೆ ?

Mr. SPEAKER.—There should be no arguments.

ಶ್ರೀ ಟಿ. ಮಾದಯ್ಯಗೌಡ.—ರೈತರಿಗೆ ಬೇಕಾದ ಕಬ್ಬಿಣ ಮತ್ತು ಕಬ್ಬಿಣ ಸಾಮಾನುಗಳನ್ನು ಒದಗಿಸುವುದಕ್ಕೆ ಏನು ಏರ್ಪಾಡು ಮಾಡಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಕಬ್ಬಿಣ ಒದಗಿಸುವುದಕ್ಕೆ ಕೆಲವು ಕಡೆ ಲೈಸೆನ್ಸ್ ಕೊಟ್ಟಿದ್ದೇವೆ. ಸ್ವಾಕಿಸ್ಟ್ ಅದನ್ನು ಒದಗಿಸಿಕೊಡುತ್ತಾರೆ.

ಶ್ರೀ ಟಿ. ಮಾದಯ್ಯಗೌಡ.—ಎಷ್ಟು ಜನ ಸ್ವಾಕಿನ್ನು ಮೈತ್ನೂರು ರಾಜ್ಯದಲ್ಲಿದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ಈ ವಿವರ ನನ್ನ ಹತ್ತಿರವಿಲ್ಲ.

1-30 P.M.

Sri GANJI VEERAPPA.—Is not iron a controlled commodity or is it sold in the open market ?

Sri K. MALLAPPA.—It is not a controlled commodity; it is sold in the open market.

Sri GANJI VEERAPPA.—Then, what is the requirement of our State and what is the production?

Sri K. MALLAPPA.—Sir, the entire need of the State is met; there is no difficulty in meeting all the needs.

Sri G. V. GOWDA.—If so, where is the need for the Controller?

Sri K. MALLAPPA.—Certain quantity is produced here and certain quantity is imported. In order to make proper distribution, the Steel Controller will issue permits.

Sri C. J. MUCKANNAPPA.—What is the surplus left over after meeting the demand of the State?

Sri K. MALLAPPA.—No surplus is left over, Sir.

ಶ್ರೀ ಇ. ನಾರಾಯಣಗೌಡ.—ಕಬ್ಬಿಣದ ಕೊರತೆಯಿಲ್ಲವೆಂದು ಉತ್ತರ ಬಂದಿದೆ. ಅನೇಕ ಸೊಸೈಟಿಗಳು ಇಂಡೆಂಟ್ ಮಾಡಿ ವರ್ಷಗಟ್ಟಲೆ ಆಗಿದ್ದರೂ ಜಿಂಕ್‌ಷೀಟ್ ಮತ್ತು ಕಬ್ಬಿಣ ಸರಬರಾಜು ಆಗದೆ ಹಣ ಡಿಪಾಜಿಟ್‌ನಲ್ಲಿಯೇ ಇರುವುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಕೆ. ಮಲ್ಲಪ್ಪ.—ಜಿಂಕ್‌ಷೀಟ್‌ಗಳು ಸಾಕಷ್ಟು ಸಿಕ್ಕುತ್ತಿಲ್ಲ. ಆದರೆ ಸಾಮಾನ್ಯವಾಗಿರುವ ಕಬ್ಬಿಣದ ಕೊರತೆಇಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಹಳ್ಳಿಗಳಲ್ಲಿ ರೈತರು ಮನೆಕಟ್ಟಬೇಕಾದರೆ ಕೆಟಕಿ ಸರಾಕೆಗಳಿಗೆ, ಒಂದಕ್ಕೆ ಎರಡುರೂಪಾಯಿಗಳಂತೆ ಬ್ಲಾಕ್‌ಮಾರ್ಕೆಟ್ ತೆಗೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ಕೆ. ಮಲ್ಲಪ್ಪ.—ಆ ವಿಚಾರ ನನ್ನ ತಿಳಿವಳಿಕೆಗೆ ಬಂದಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಹಳ್ಳಿಗಳಲ್ಲಿ ಚಕ್ಕಡಿ ಮಾಡಲಿಕ್ಕೆ ಹಳಿಪಟ್ಟಿ ಅಚ್ಚು ಮುಂತಾದವನ್ನು ಮಾಡಲು ಬೇಕಾದಂಥ ಕಬ್ಬಿಣಕ್ಕೆ ಬಹಳ ಕೊರತೆಇದೆ ಎಂದು ಅನೇಕ ತಾಲ್ಲೂಕು ಬೊರ್ಡ್‌ಗಳವರು ಬರೆದಿರುವುದು ಸರ್ಕಾರದ ಲಕ್ಷ್ಯಕ್ಕೆ ಬಂದಿದೆಯೇ?

ಶ್ರೀ ಕೆ. ಮಲ್ಲಪ್ಪ.—ಗಾದಿಪಟ್ಟಿಗಳು ವಿತರಣೆ ಸಹಕಾರ ಸಂಘಗಳ ಮೂಲಕ ನಡೆಯುತ್ತದೆ. ಅವು ಸಿಕ್ಕುತ್ತಿಲ್ಲ ಎನ್ನುವ ದೂರು ನನಗೆ ಕೇಳಿಬಂದಿಲ್ಲ.

ಶ್ರೀ ಎ ಕೃಷ್ಣಪ್ಪೆಟ್ಟಿ.—ಈಗ ಕಬ್ಬಿಣಬೇಕಾದಷ್ಟು ಮಾರ್ಕೆಟ್ಟಿನಲ್ಲಿಲ್ಲವೆಂಬುದು ತಮ್ಮಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ—ಇದು ವಾಸ್ತವವಿಲ್ಲವೆಂದರೆ ಒಪ್ಪಿಕೊಳ್ಳುತ್ತಾರೆಯೇ?

Mr. SPEAKER.—That question need not be answered.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಜ್ಜಂಪುರದಲ್ಲಿ ಕಟ್ಟುವ ಪೌರನಭಾಕಟ್ಟಡಕ್ಕೆ ಟ್ರಸಸ್ ಇಲ್ಲದ್ದರಿಂದ ಕಂಟ್ರಾಕ್ಟ್‌ರುಗಳು ನಿಧಾನಮಾಡಿದರೆಂದು ಈಗ ತಾನೇ ಆರ್ಥಿಕ ಮಂತ್ರಿಗಳು ಅಪ್ಪಣೆಕೊಡಿಸಿದರು. ಇದನ್ನುಮಾಡಲು ಏನೂ ಉಪಯೋಗವಿಲ್ಲದೇ ಇರುವ ಕಬ್ಬಿಣವನ್ನು ಬಳಸುತ್ತಾರೆ. ಹೀಗಿರುವಾಗ ಕಬ್ಬಿಣಕ್ಕೆ ಅಭಾವವಿದೆ ಎಂಬುದನ್ನು ಸರ್ಕಾರ ಈಗಲಾದರೂ ಒಪ್ಪಿಕೊಳ್ಳುತ್ತದೆಯೇ?

Sri B. D. JATTI.—Sir, on a point of clarification. The reason given was up to 1960 and not after 1960.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕಬ್ಬಿಣದ ಅಭಾವವಿಲ್ಲವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಆದರೆ ಕಬ್ಬಿಣದ ಅಭಾವ ಬರುವುದಕ್ಕೆ ಡಿಸ್ಟ್ರಿಕ್ಟ್ ಮತ್ತು ಸಿಟಿ headquarters ನಲ್ಲಿರುವವರಿಗೇ ಸಾಕಷ್ಟು ಲೈಸೆನ್ಸ್ ಕೊಡುವುದರಿಂದ ಅಭಾವವುಂಟಾಗುತ್ತದೆ. ತಾಲ್ಲೂಕ್‌ವಾರ್ ಲೈಸೆನ್ಸ್ ಕೊಟ್ಟರೆ ಅಭಾವ ಕಡಮೆಯಾಗುತ್ತದೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಮಲ್ಲಪ್ಪ.—ಕಬ್ಬಿಣದ ಅಭಾವವಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ದೊಡ್ಡದೊಡ್ಡ ಪಟ್ಟಣಗಳಲ್ಲಿ ತರಿಸಿಕೊಟ್ಟರೆ, ತಿಪಟೂರಿನಿಂದ 150-200 ಮೈಲಿ ಬೆಂಗಳೂರಿಗೆ ಬಂದು ಕಬ್ಬಿಣವನ್ನು ತೆಗೆದುಕೊಂಡು ಹೋಗಬೇಕಾದರೆ transport charges ಜಾಸ್ತಿಯಾಗುತ್ತವೆ ಆದುದರಿಂದ ತಾಲ್ಲೂಕ್ ವಾರ್ ಲೈಸೆನ್ಸ್ ಕೊಡುವುದಕ್ಕೆ ವ್ಯವಸ್ಥೆಮಾಡುತ್ತೀರಾ?

ಶ್ರೀ ಕೆ. ಮಲ್ಲಪ್ಪ.—ಲೈಸೆನ್ಸ್ ತಾಲ್ಲೂಕ್ ವಾರ್‌ಕೊಟ್ಟಿದೆ. ತುಮಕೂರಿನಲ್ಲಿ ಲೈಸೆನ್ಸ್ ಕೊಟ್ಟಿರುವವರು ಇದ್ದಾರೆಂದು ಕೇಳಿದ್ದೇನೆ. ತಿಪಟೂರಿನಲ್ಲಿ ಸ್ಟಾಕಿಸ್ಟರಿಲ್ಲದೆ ಇದ್ದರೆ, ಕಂಟ್ರೋಲರ್‌ಗೆ ಬರೆದು ಕೊಂಡರೆ ಅವರು ಪರಿಶೀಲನುತ್ತಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕಬ್ಬಿಣದ ಕೊರತೆ ಇಲ್ಲವೆಂದು ಹೇಳುತ್ತಿದ್ದರೂ, ಸರ್ಕಾರದವರು ಹೊರಗಡೆಯಿಂದ ಸಾವಿರಾರು ಟನ್ ಕಬ್ಬಿಣವನ್ನು ಸರ್ಕಾರದ ಉಪಯೋಗಕ್ಕೋಸ್ಕರ ತರಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಮಲ್ಲಪ್ಪ.—ಅದು ಉಕ್ಕಿಗೆ ಸಂಬಂಧಿಸಿದ್ದು 16 ಗೇಜಿಗಿಂತ ಹೆಚ್ಚಿನಮಟ್ಟದ ಷೀಟ್ಸ್ ಬೇಕಾದಾಗ ಪರದೇಶಗಳಿಂದ ತರಿಸಿಕೊಳ್ಳಬೇಕಾಗುತ್ತದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಕಬ್ಬಿಣಕ್ಕಾಗಿ ಜನ ಕಂಟ್ರೋಲರಿಗೆ ಬರೆದರೆ ಅದಕ್ಕೆ ಒಂದೆರಡು ವರ್ಷ ತಡವಾಗುತ್ತಿರುವುದರಿಂದ ಕಂಟ್ರೋಲರ್‌ಗೆ ಬರೆದಮೇಲೆ ಮೂರು ನಾಲ್ಕುತಿಂಗಳೊಳಗೆ ಕಬ್ಬಿಣದೊರೆಯುವಂತೆ ಮಾಡುವುದಕ್ಕೆ ಏನಾದರೂ ಕಾಲನಿಗದಿಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವೇ?

ಶ್ರೀ ಕೆ. ಮಲ್ಲಪ್ಪ.—ಸಾವಕಾಶವಾದಾಗ ಅಂಥದ್ದನ್ನು ಸರ್ಕಾರಕ್ಕೆ ತಿಳಿಸಿದರೆ, ಸಾವಕಾಶವನ್ನು ಆದಷ್ಟು ಮಟ್ಟಿಗೂ ಕಡಮೆಮಾಡಲು ಪ್ರಯತ್ನಿಸಬಹುದು. ಇದುವರೆಗೆ ಇಂಥದ್ದು ಯಾವುದೂ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಕಬ್ಬಿಣದ ಅಭಾವವಿಲ್ಲವೆಂದು ಅಪ್ಪಣೆಕೊಡಿಸಿದಮೇಲೆ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯನ್ನು registered stockists ಎಂದು ಏಕೆ ಪರಿಗಣಿಸುವುದಿಲ್ಲ? ಅದಕ್ಕೆ ತೊಂದರೆ ಏನಿದೆ?

ಶ್ರೀ ಕೆ. ಮಲ್ಲಪ್ಪ.—ಇಂಡಿಯಾ ಸರ್ಕಾರದವರು Steel Controller ಎಂದು ನೇಮಿಸಿದ್ದಾರೆ. ನಮ್ಮಲ್ಲಿ Deputy Controller ಇದ್ದಾರೆ. ಇವರಿಗೆ ಅರ್ಜಿ ಹಾಕಿದರೆ ಇವರು authorise ಮಾಡುತ್ತಾರೆ, ಸ್ಟೀಲ್ ಕಂಟ್ರೋಲರು ಸ್ಟಾಕ್ ಮಾಡಿಕೊಳ್ಳುವುದಕ್ಕೆ ಪರ್ಮಿಟ್ ಕೊಡುತ್ತಾರೆ.

ಶ್ರೀ ಬಿ. ಕೆ. ಪುಟ್ಟಯ್ಯ.—ಕೆಲವು ಸೊಸೈಟಿಗಳವರು ದುಡ್ಡು ಕೊಟ್ಟು ಮೂರುವರ್ಷಗಳಾದರೂ ಕಬ್ಬಿಣ ಬಂದಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಇಲ್ಲ.

ಶ್ರೀ ಗಂಗಾಧರ ನಾಮೋಷಿ.—ಅಂಗಡಿ ಇದ್ದವರು ಸ್ಟಾಕಿಸ್ಟ್ ಆಗಲು ಅರ್ಜಿಕೊಟ್ಟರೂ, ಅವರಿಗೆ ಕೊಡದೆ ಅಂಗಡಿ ಇಲ್ಲದವರಿಗೆ ಲೈಸೆನ್ಸ್ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಯಾರಾದರೂ ಸ್ಟಾಕ್‌ಮಾಡಿಕೊಳ್ಳಲು ಲಾಯಖ್ ಆಗಿದ್ದರೆ ಅಂಥವರಿಗೆ ಅಂಗಡಿ ಇಲ್ಲದೇ ಇದ್ದರೂ ಲೈಸೆನ್ಸ್ ಕೊಡಬಹುದು.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಹೊರಗಡೆಯಿಂದ ಕಬ್ಬಿಣ ತರಿಸುತ್ತೇವೆಂದು ಹೇಳಿದರು. ಸ್ಥಳದಲ್ಲಿ ಏನು ದರವಿದೆಯೋ ಅದೇ ದರವನ್ನು ಹೊರಗಡೆಕೊಟ್ಟು ಸಾಗಾಣಿಕೆ ಖರ್ಚನ್ನು ಹಾಕಿಕೊಂಡು ತರುವುದರ ಬದಲು ಮೈಸೂರಿನಲ್ಲಿಯೇ ಇರುವ ಸ್ಟಾಕಿಸ್ಟ್‌ರ ಮುಖಾಂತರ ತರಿಸಿಕೊಂಡರೆ ಸರ್ಕಾರಕ್ಕೆ ಅನುಕೂಲವಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಇಂಡಿಯಾ ಸರ್ಕಾರದವರು ಇಂಥ ದರಕ್ಕೇ ಮಾರಬೇಕು ಎಂದು ನಿಗದಿಮಾಡಿದ್ದಾರೆ ಎಲ್ಲಯೇ ಮಾರಲಿ ಅದರ ಕ್ರಯ ಒಂದೇ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಕಬ್ಬಿಣ ವ್ಯಾಪಾರ ಪಂಶಪಾರಂಪರ್ಯವಾಗಿ ಕೇವಲ ಕೆಲವರ ಕೈಯಲ್ಲಿದೆ. ಕಾಲಕ್ಕೆತಕ್ಕಂತೆ ಬದಲಾವಣೆಮಾಡಿ ಹೆಚ್ಚುಜನಗಳಿಗೆ ಈ ವ್ಯಾಪಾರದಲ್ಲಿ ತೊಡಗುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಸ್ಟೀಲ್ ಕಂಟ್ರೋಲರ್ ಕಲ್ಕತ್ತಾದಲ್ಲಿದ್ದಾರೆ. ನಾವು ಪರ್ಮಿಟ್ ಕೊಡುವುದಿಲ್ಲ. ಅವರಿಗೆ ಬರೆದರೆ ಅವರು ಆಲೋಚನೆ ಮಾಡಬಹುದು.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ವ್ಯವಸಾಯದ ಉಪಕರಣಗಳನ್ನು ಮಾಡುವುದಕ್ಕೆ $\frac{1}{4}$ ಅಂಗುಲದ ದಪ್ಪವಿರುವ plates ಬೇಕೆಂದು ಕುಣಿಗಲ್ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಯವರು ಅರ್ಜಿ ಹಾಕಿದ್ದರೂ, ಸಿಕ್ಕದೆ ಇರುವುದಕ್ಕೆ ಕಾರಣವೇನು ? ಅಥವಾ ಏನಿಲ್ಲವೆಂದರೆ ಇದಕ್ಕೆ ಸಮಜಾಯಿಷಿ ಏನು ?

ಶ್ರೀ ಕೆ. ಮಲ್ಲಪ್ಪ.—ಕೆಲವು ಸೈಜುಗಳಲ್ಲಿ ಇಲ್ಲ ತಯಾರಾಗುವುದಿಲ್ಲ. ಹೊರಗಡೆಯಿಂದ ಬರಬೇಕು. ಇದರ ಕೊರತೆಯಿದೆ. ಅದಷ್ಟು ಹೆಚ್ಚಿನ ಪ್ರಮಾಣದಲ್ಲಿ ಇಂಥ ಷೀಟುಗಳನ್ನು ತರಿಸಿ ಒದಗಿಸುವ ಏರ್ಪಾಡನ್ನು ಸರ್ಕಾರಮಾಡುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಲೈಸೆನ್ಸ್ ಹೊಂದಿರುವ ಡೀಲರ್‌ಗಳು ಜನಗಳಿಗೆ ಕಬ್ಬಿಣ ಸಿಕ್ಕದಂತೆ ಅಭಾವವನ್ನು ಉಂಟುಮಾಡುತ್ತಿದ್ದಾರೆ. ಇದನ್ನು ಸರಿಮಾಡಬೇಕೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಲೈಸೆನ್ಸ್‌ಹೊಂದಿದ ಡೀಲರ್‌ಗಳು ಸರಿಯಾದ ರೀತಿಯಲ್ಲಿ ಕಬ್ಬಿಣವನ್ನು ಹಂಚದೆ ಇದ್ದರೆ, ಅಂಥವರ ವಿಷಯವನ್ನು ಸರ್ಕಾರಕ್ಕೆ ತಿಳಿಸಿದರೆ ತಕ್ಕ ಕಾರ್ಯಕ್ರಮವನ್ನು ಅವರಮೇಲೆ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಡೀಲರುಗಳು ತಮ್ಮಲ್ಲಿರುವ ದಾಸ್ತಾನು ಎಷ್ಟೆಂಬುದನ್ನು ಎಲ್ಲರಿಗೂ ಕಾಣುವಂಥ ಒಂದು ಬೋರ್ಡ್ ಹಾಕುವುದರಿಂದ ಅವರಲ್ಲ ದಾಸ್ತಾನಿದೆಯೇ ಇಲ್ಲವೇ ಎಂದು ಗೊತ್ತಾಗುತ್ತದೆ. ಇದರಬಗ್ಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ನನಗೆತಿಳಿದಮಟ್ಟಿಗೆ ಕಬ್ಬಿಣವನ್ನು ಹೊರಗಡೆ ಇಡುತ್ತಾರೆ, ಒಳಗೆ ಇಡುವುದಿಲ್ಲವಾದ್ದರಿಂದ ಬೋರ್ಡ್ ಹಾಕುವ ಅವಶ್ಯಕತೆ ಇಲ್ಲವೆಂದು ತಿಳಿದುಕೊಂಡಿದ್ದೇನೆ.

Sri K. S. SURYANARAYANA RAO.—Sir, most of it will be in the godowns and not kept outside !

Sri K. MALLAPPA.—If there is any complaint against any dealer that he has not been selling iron properly, action will be taken and we will see that his license is cancelled.

Sri S. SIVAPPA.—Sir, has it come to more the notice of the Government that iron is available in black market than in the open market ?

Sri K. MALLAPPA.—There is actually no blackmarket so far as iron is concerned, Sir.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಕೆಲವು ವ್ಯಾಪಾರಸ್ಥರು ಕೆಟ್ಟ ಮಾಲನ್ನು ತೋರಿಸುತ್ತಾರೆ. ಅಲ್ಲದೆ ಕೆಲವರಿಗೆ ಪರ್ಮಿಟ್‌ನ್ನು ಕೊಟ್ಟಿದ್ದರೂ ಕಬ್ಬಿಣ ಇಲ್ಲ ಎಂದು ಹೇಳುವುದರಿಂದ ಮೂರು ತಿಂಗಳಾದ ಮೇಲೆ ಪರ್ಮಿಟ್ಟು ರ್ಯಾಪ್ಸು ಆಗುತ್ತದೆ. ಅದರ ಬಗ್ಗೆ ಏನು ಮಾಡುತ್ತೀರಿ ?

ಶ್ರೀ ಕೆ. ಮಲ್ಲಪ್ಪ.—ಕಬ್ಬಿಣ್ಣ ಕೆಟ್ಟು ಹೋಗುತ್ತದೆ ಎಂದು ನಾನು ತಿಳಿದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಕಬ್ಬಿಣದ ಅಭಾವ ಏಲ್ಲ ಎಂದು ಈಗ ಹೇಳಿದರು. ಕಳೆದವಾರದಲ್ಲ ಅಗ್ರಿಕಲ್‌ಚರ್ ಮಿನಿಸ್ಟರು ಮಾಡಿರತಕ್ಕ ಸ್ಟೇಟ್ ಮೆಂಟಿನ ಪ್ರಕಾರ Agricultural implementsಗಾಗಿ ನುಮಾರು ೫೬,೦೦೦ ಟನ್ನುಗಳಷ್ಟು ಕಬ್ಬಿಣ ಬೇಕೆಂದು ಹೇಳಿದ್ದಾರೆ. ಇದಕ್ಕಾಗಿ ಇಂಡಿಯಾ ಸರಕಾರದಿಂದ ಅರಾಟುಮೆಂಟಾಗಿರುವುದು ನುಮಾರು ೧೯,೦೦೦ ಟನ್ನುಗಳು ಎಂದಾಗಿದೆ. ಮತ್ತು ಒಂದು ಸಾವಿರ ಟನ್ನುಗಳಷ್ಟು ಮಾತ್ರ ರೀಲಸಾಗಿದೆ ಎಂದು ಹೇಳಲಾಗಿದೆ. ಹೀಗೆ ಮಾನ್ಯ ಮಂತ್ರಿಗಳು ಹೇಳಿರುವ ಹೇಳಿಕೆಗೂ ವ್ಯವಸಾಯ ಮಂತ್ರಿಗಳ ಹೇಳಿಕೆಗೂ ವ್ಯತ್ಯಾಸವಾಗುತ್ತದೆಯಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ನಾನಾಗಲೇ ಹೇಳಿದಂತೆ ಕೆಲವು ತರಹದ ಕಬ್ಬಿಣ ನಮ್ಮಲ್ಲಿಲ್ಲ. ಅವನ್ನು ಪರದೇಶದಿಂದ ತರಿಸಬೇಕಾಗಿದೆ. ಆದರೆ ಸಾಮಾನ್ಯವಾಗಿ ಬೇಕಾಗುವ ರೌಂಡ್ಸ್, ಸ್ಕ್ವೇರ್ಸ್, Angles, etc., ಇವು ಸಾಕಷ್ಟು ಸಿಕ್ಕುತ್ತವೆ. ಇವೆರ್ಲಾ ಅಗ್ರಿಕಲ್‌ಚರಲ್ ಇಂಪ್ಲಿಮೆಂಟ್ಸುಗಳಿಗೆ ಬೇಕಾಗುತ್ತವೆ, ಸ್ಪೆಷರ್ ಸ್ಟೀಲ್ ಇಲ್ಲಿ ತಯಾರಾಗುತಿಲ್ಲ. ಸಾಕಷ್ಟು ಪ್ರಮಾಣವನ್ನು ಹೊರಗಡೆಯಿಂದ ತರಿಸಬೇಕಾಗಿದೆ.

ಶ್ರೀ ಕೆ. ಲಕ್ಕಪ್ಪ.—ಯಾವ ಯಾವ ಸೈಜಿನ ಕಬ್ಬಿಣ ಇಲ್ಲಿ ಸಿಕ್ಕುತ್ತದೆ ಮತ್ತು ಯಾವ ಯಾವ ತರದವನ್ನು ಹೊರಗಡೆಯಿಂದ ತರಿಸಬೇಕು ?

ಶ್ರೀ ಕೆ. ಮಲ್ಲಪ್ಪ.—14 ಗೇಜಿನ ಪ್ರಮಾಣದಲ್ಲಿರತಕ್ಕ ಸ್ಟೀರ್ ಪೀಟುಗಳು ನಮ್ಮಲ್ಲಿ ಸಿಕ್ಕುತ್ತಿಲ್ಲ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಕಬ್ಬಿಣದ ಕೊರತೆ ತೀವ್ರವಾಗಿದೆ ಎಂದು ಈ ಪ್ರಶ್ನೆ ಹಾಕಿದ್ದು. ಈಗ ಯಾರಾದರೂ ನಮ್ಮಲ್ಲಿಗೆ ಕಬ್ಬಿಣಬೇಕು ಎಂದು ಕೇಳಿದರೆ ಅಂತಹವರನ್ನು ನೇರವಾಗಿ ಸಚಿವರ ಬಳಿ ಕಳುಹಿಸಿದರೆ ಸಹಾಯ ಮಾಡುತ್ತೀರಾ ?